

ಗ್ರಾಮಸ್ಥರು. ನಾಟಕ ಆರಂಭವಾಗಿತು.

ಕಣ್ಣೂರಿನ ಮಾಲೀಕ್ ಸಾಹೇಬ್ ಇತರೆ ಜಾತಿ–ಧರ್ಮಗಳ ಜನರ ಎತ್ತುಗಳಿಗೆ ಲಾಳ ಕಟ್ಟುವ ಕೆಲಸವಿಲ್ಲದೇ ಹಸಿವಿನಿಂದ ನರಳಿ ಸತ್ತಿದ್ದು, ಆತನ ಕುಟುಂಬ ಬೀದಿ ಪಾಲಾಗಿದ್ದು, ಶೆಟ್ಟಿ ವ್ಯಾಪಾರವಿಲ್ಲದೇ ಊರು ಬಿಟ್ಟು ಹೋಗಿದ್ದು, ಗೌಡನ ದೇಹ ಸರಿಯಾಗಿ ದಫನ್ ಮಾಡದಿದ್ದಕ್ಕೆ ನಾಯಿ ನರಿಗಳಿಗೆ ಆಹಾರವಾಗಿ, ದೇಹದ ಅಳಿದುಳಿದ ಭಾಗಗಳು ಊರ ಹೆಬ್ಬಾಗಿಲಲ್ಲಿ ಬಿದ್ದು ವಾರಗಟ್ಟಲೆ ಗಬ್ಬುನಾತ ಬೀರಿದ್ದು, ದೊಡ್ಡ ದೊಡ್ಡ ರೈತರು ಕೂಲಿ ಕಾರ್ಮಿಕರಿಲ್ಲದೇ ಹೊಲ ಬೀಳು ಬಿಟ್ಟಿದ್ದು, ಜನಾಂಗೀಯ ದ್ವೇಷ, ದಳ್ಳುರಿಗೆ ಗಂಡಸರು ಊರುಕೇರಿ, ಹೆಂಡತಿ–ಮಕ್ಕಳು, ದನಕರುಗಳನ್ನು ಅನಾಥವಾಗಿಸಿ ತಿಂಗಳುಗಟ್ಟಲೆ ತಲೆಮರೆಸಿಕೊಂಡಿದ್ದು, ಅನ್ನ–ನೀರಿನ ವಿಷಯದಲ್ಲೂ ಧರ್ಮ, ಜಾತಿ ಎಣಿಸಿ ಬದುಕು ದಯನೀಯವಾಗಿದ್ದು... ಇಂತಹ ಹತ್ತು ಹಲವು ನೈಜ ಘಟನೆಗಳನ್ನೇ ಹೆಕ್ಕಿ ಮಕ್ಕಳು ಮನೋಜ್ಞವಾಗಿ ಅಭಿನಯಿಸಿದರು. ಜನರು ಪರಸ್ಪರ ಪ್ರೀತಿ, ಸಹಕಾರ, ಸಹಬಾಳ್ವೆ, ಭ್ರಾತೃತ್ವದಿಂದ ಬದುಕಿದಾಗ ಊರು ಸ್ವರ್ಗ ಆಗುವ ಪರಿಯನ್ನೂ ತೋರಿಸಿ ಜನರ ಕಣ್ಣು ತೆರೆಸಿದರು. ನಾಟಕದ ಕೊನೆಯಲ್ಲಿ ಭಾರತದ ಸಂವಿಧಾನ ಮತ್ತು ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ವಂದಿಸುತ್ತಾ – 'ದ್ವೇಷ ಅಳಿಸೋಣ, ಸರ್ವಜನಾಂಗದ ಶಾಂತಿಯ ತೋಟದ ಹೂವುಗಳಾಗೋಣ', 'ದ್ವೇಷ ಅಳಿಯಲಿ, ಪ್ರೀತಿ ಅರಳಲಿ...' ಎನ್ನುತ್ತಾ ನಾಟಕಕ್ಕೆ ತೆರೆ ಎಳೆದರು.

ಕಣ್ಣೂರಿನ ಅಷ್ಟೂ ಜನರ ಕಂಗಳು ಹನಿಗೂಡಿ, ಹೃದಯ ತುಂಬಿ ಬಂದವು. ಎಲ್ಲರಿಗೂ ತಮ್ಮ ತಮ್ಮ ತಪ್ಪಿನ ಅರಿವಾಯಿತು. ಅಲ್ಲಲ್ಲಿ ಬೇರೆ ಬೇರೆಯಾಗಿ ನಿಂತಿದ್ದ ವಿಭಿನ್ನ ಧರ್ಮ, ಜಾತಿಯವರು ಅಪ್ರಯತ್ನಪೂರ್ವಕವಾಗಿ ಪರಸ್ಪರ ಬೆರೆತುಹೋದರು. ಒಬ್ಬರಿಗೊಬ್ಬರು ಬಿಗಿದಪ್ಪಿಕೊಂಡು ಇನ್ನುಮುಂದೆ ಸಹೋದರರಂತೆ, ಒಂದೇ ಕುಟುಂಬದ ಸದಸ್ಯರಂತೆ ಬಾಳೋಣವೆಂದರು. ಕಣ್ಣುತೆರೆಸಿದ ಕಣ್ಮಣಿಗಳನ್ನು ಬಾಯಿ ತುಂಬಾ ಕೊಂಡಾಡಿ, ಹರಸಿದರು.

ಪ್ರತಿಕ್ರಿಯಿಸಿ: feedback@sudha.co.in



# ಬಾಪೂ ಎಂದರೆ

■ ಅಮೃತೇಶ್ವರ ತಂಡರ
ಚಿತ್ರ: ಸಂತೋಷ್ ಸಿಹಿಹಿತ್ಲು



ಬಾಪೂ ಎಂದರೆ ಭಾರತ ಮಾತೆಯ
ಬಂಧನ ಬಿಡಿಸಿದವ
ಗುಲಾಮಗಿರಿಯ ಹೋಗಲಾಡಿಸಿ
ಸ್ವತಂತ್ರ ಕೊಡಿಸಿದವ

ಬಾಪೂ ಎಂದರೆ ಸೀದಾ ಸಾದಾ
ಜೀವನ ನಡೆಸಿದವ
ದೇಶಕ್ಕಾಗಿಯೇ ತನುಮನವನ್ನು
ಮೀಸಲು ಇರಿಸಿದವ

ಬಾಪೂ ಎಂದರೆ ಬರಿಗೈಯಿಂದ
ಯುದ್ಧವ ಜಯಿಸಿದವ
ಸತ್ಯ ಶಾಂತಿಯ ಮಂತ್ರವ ಬೋಧಿಸಿ
ಸಮರಸ ಸಾರಿದವ

ಬಾಪೂ ಎಂದರೆ ಭವ್ಯ ಭಾರತ
ಸಂಸ್ಕೃತಿ ಉಳಿಸಿದವ
ದೀನ ದಲಿತರ ಪಾಲಿನ ಸೂರ್ಯ
ಬೆಳಕನು ತೋರಿದವ

ಬಾಪೂ ಎಂದರೆ ಬರಿಮೈ ಸಂತ
ನಡೆದಾಡುವ ದೈವ
ಕಷ್ಟವ ಕಂಡು ಕಂಬನಿ ವರೆಸುವ
ಕರುಣಾಮಯಿ ಜೀವ

ಬಾಪೂ ಎಂದರೆ ಸ್ವಾವಲಂಬನೆ
ಪಾಠವ ಕಲಿಸಿದವ
ರಾಮರಾಜ್ಯದ ಕಲ್ಪನೆಯಲ್ಲಿ
ದಿನವೂ ತೇಲಿದವ

ಬಾಪೂರವರ ಜೀವನವೊಂದು
ಅದ್ಭುತ ಸಂದೇಶ
ಎಂದಿಗೂ ಬೆಳಗುವ ನಂದಾ ದೀಪ
ಲೋಕಕೆ ಆದರ್ಶ ■

## ಕುಂಚ ಪ್ರಪಂಚ





ಚೇತನ್ ಕುಮಾರ್ ಜಿ.ಎಸ್.
ಹತ್ತನೇ ತರಗತಿ
ಎಂಎಂ ಸರ್ಕಾರಿ ಪ್ರೌಢಶಾಲೆ
ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ